**ಓ.ಎಸ್ ನಂ. 17/2023 ಡಿ.ಡಬ್ಲ್ಯೂ-1 (ಆರ್ ರಂಗಪ್ಪ)**

**ಸಾಕ್ಷಿಯನ್ನು ದಿನಾಂಕಃ 22.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುರಿದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಸ್ ಎ ಪಿ ರವರ ಪರವಾಗಿ ಶ್ರೀ ಪಿ ಎನ್ ಜಿ ವಕೀಲರಿಂದಃ**

1. ನಾನು ಉಪ ನೊಂದಣಾದಿಕಾರಿಯಾಗಿ 5 ವರ್ಷಗಳ ಕಾಲ ಸೇವೆ ಸಲ್ಲಿರುತ್ತೇನೆ. ಉಪ ನೊಂದಣಾಧಿಕಾರಿಗಳಿಗೆ ನೊಂದಾಯಿತ ದಾಖಲಾತಿ ಗಳ ಬಗೆಗ ಸಾಮಾನ್ಯವಾಗಿ ಜ್ಞಾನ ಇರುತ್ತದೆ ಎಂದರೆ ಸರಿ. ಒಂದು ದಾಖಲಾತಿ ನೊಂದಣಿ ಮಾಡಿಸುವ ಸಮಯ ಅದಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿ ನೊಂದಣಿ ಮಾಡಿಸಲಾಗುತ್ತದೆ ಎಂದರೆ ಸರಿ.

2. ನಾನು ಕರ್ತವ್ಯದಲ್ಲಿದ್ದ ಸಮಯ ಒಂದು ಬಾರಿ ಆಧಾಯ ತೆರಿಗೆಯನ್ನು ಪಾವತಿಸಿರುತ್ತೇನೆ. ನಾನು ದಿಃ31.07.2000 ರ ಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು ನಿವೃತ್ತಿ ಹೊಂದಿದ ನಂತರ ಯಾವುದೇ ಆಧಾಯ ತೆರಿಗಯನ್ನು ಪಾವತಿಸಿರುವುದಿಲ್ಲ ಎಂದರೆ ಸರಿ. ದಿಃ 22.08.2007 ರಲ್ಲಿ ಕ್ರಯಪತ್ರ ಆಗುವ ಪೂರ್ವದಲ್ಲಿ ಯಾವುದೇ ಕರಾರುಪತ್ರವನ್ನು ಮಾಡಿಕೊಂಡಿರುವುದಿಲ್ಲ. ನಾನು ದಾವಾಸ್ತಿಯಲ್ಲಿ 2 ಎಕರೆ ಜಮೀನನ್ನು ಖರೀದಿಸುವ ಪೂರ್ವದಲ್ಲಿ ಸಾರ್ವಜನಿಕ ಪ್ರಕಟಣೆಯನ್ನು ನೀಡಿ ಖರೀದಿಸಿರುವುದಿಲ್ಲ. ನಾನು ಜಮೀನನ್ನು ಖರೀದಿಸುವ ಪೂರ್ವದಲ್ಲಿ ಸಾರ್ವಜನಿಕ ಪ್ರಕಟಣೆಯನ್ನು ನೀಡಿ ಖರಿದಿಸಲು ಯಾವುದೇ ತೊಂದರೆ ಇರಲಿಲ್ಲ. ನಾನು ಮಸಣಕುಪ್ಪೆ ಗ್ರಾಮದ ಸರ್ವೆ ನಂಬರ್ 4/33/7 ರಲ್ಲಿ 2 ಎಕರೆ ಜಮೀನನ್ನು ಖರೀದಿ ಮಾಡುವ ಸಮಯದಲ್ಲಿ ದುರಸ್ತಿಯಾಗಿರಲಿಲ್ಲ ಆದರೆ ಪ್ರತ್ಯೇಕವಾದ ಪಹಣಿ ಬರುತ್ತಿತ್ತು.

3. ಮಸಣಕುಪ್ಪೆ ಗ್ರಾಮದ ಸರ್ವೆ ನಂಬರ್ 4 ರಲ್ಲಿ ಒಟ್ಟು 585 ಎಕರೆ 17 ಗುಂಟೆ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 4 ರಲ್ಲಿ ಜಮೀನು ಖರೀದಿಸುವ ಪೂರ್ವದಲ್ಲಿ ಸರ್ವೆ ಮಾಡಿಸಿ ಖರೀದಿಸಿರುವುದಿಲ್ಲ ಎಂದರೆ ಸರಿ, ಪ್ರತ್ಯೇಕ ಪಹಣಿ ಬರುತ್ತಿದ್ದರಿಂದ ನಾನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಜಮೀನು ಖರೀದಿಸುವ ಸಮಯ ಹದ್ದುಬಸ್ತನ್ನು ಮಾಡಿ ಖರೀದಿಸಿರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರಿದು ಕುಮಾರ್ ಎಂಬುವವರು ಸ್ಥಳ ತೋರಿಸಿಕೊಟ್ಟಂತೆ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಣ್ಣಪ್ಪ ನವರ ಹೆಸರಿನಲ್ಲಿದ್ದ ಜಮೀನನ್ನು ಅವರಮಕ್ಕಳುಗಳು ಸ್ಕೆಚ್ ಮಾಡಿಕೊಂಡು ಪಾಲು ಮಾಡಿಕೊಂಡಿರುವಂತಹ ಜಮೀನನ್ನು ನೀವು ಖರೀದಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಅವರು ಪಂಚಾಯಿತಿ ಪಾಲು ಪಾರಿಕತ್ತು ಮಾಡಿಕೊಂಡು ಇದ್ದ ಜಮೀನನ್ನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸದರಿ 2 ಎಕರೆ ಜಮೀನನ್ನು ಖರೀದಿಸುವ ಸಮಯದಲ್ಲಿ ಪಂಚಾಯಿತಿ ಪಾಲು ಪಾರಿಕತ್ತು ಮಾಡಿಕೊಂಡ ದಾಖಲಾತಿ ಯನ್ನು ಪಡೆದು ಖರೀದಿಸಿರುತ್ತೇನೆ. ಸದರಿ ನಾನು ಹೇಳುವಂತಹ ಪಂಚಾಯಿತಿ ಪಾಲು ಪಾರಿಕತ್ತಿ ನಲ್ಲಿ ಹೇಳಿರುವಂತಹ ಒಕ್ಕಣೆ ಯನ್ನು ಕ್ರಯಪತ್ರದಲ್ಲಿ ಬರೆಸಲಾಗಿರುತ್ತದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು ಪಡೆದುಕೊಂಡ ಪಂಚಾಯಿತಿ ಪಾಲುಪಾರಿಕತ್ತನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಲಿಖಿತ ಹೇಳಿಕೆ ಮತ್ತು ಸಾಕ್ಷಿಯ ಪ್ರಮಾಣ ಪತ್ರದಲ್ಲಿ ಸದರಿ ಪಂಚಾಯಿತಿ ಪಾಲು ಪಾರಿಕತ್ತಿನ ಬಗ್ಗೆ ಹೇಳಿ ಬರೆಸಿರುತ್ತೇನೆ. ನಾನು ಲಿಖಿತ ಹೇಳಿಕೆಯಲ್ಲಾಗಲೀ ಅಥವಾ ಸಾಕ್ಷಿ ಪ್ರಮಾಣಪತ್ರದಲ್ಲಿ ಪಂಚಾಯಿತಿ ಪಾಲು ಪಾರಿಕತ್ತಿನ ಬಗ್ಗೆ ಹೇಳಿ ಬರೆಸಿರುವುದೂ ಇಲ್ಲ ಮತ್ತು ಆ ಬಗ್ಗೆ ದಾಖಲಾತಿ ಯನ್ನು ನ್ಯಾಯಾಲಯಕ್ಕ ಹಾಜರುಪಡಿಸಿರುವುದಿಲ್ಲ ಆದರೂ ಸಹ ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿರುತ್ತೇನೆ ಮತ್ತು ಆ ದಾಖಲಾತಿ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಮಸಣಕುಪ್ಪೆ ಗ್ರಾಮದ ಸರ್ವೆ ನಂಬರ್ 4/33/7 ರಲ್ಲಿ ದಾವಾಸ್ತಿಯು ವಾದಿಗಳ ತಂದೆ ಸಣ್ಣಪ್ಪ ಬಿನ್ ಮಲ್ಲಯ್ಯ ನವರಿಗೆ ದರಖಾಸ್ತು ಮೂಲಕ ಬಂದಂತಹ ಜಮೀನು ಎಂದರೆ ಸರಿ. ಸದರಿ ಜಮೀನಿನಲ್ಲಿ ಸಣ್ಣಪ್ಪ ನವರ ತಂದೆಯಾದ ಮಲ್ಲಯ್ಯ ನವರು ವ್ಯವಸಾಯ ಮಾಡಿಕೊಂಡಿದ್ದು, ನಂತರ ಬಗರ್ ಹುಕುಂನ ಅಡಿಯಲ್ಲಿ ಸಣ್ಣಪ್ಪ ನವರಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾಸ್ತಿಯು ಸಣ್ಣಪ್ಪ ನವರ ಹೆಸರಿಗೆ ಬಂದ ನಂತರ ಸಣ್ಣಪ್ಪ ನವರು ಮತ್ತು ಅವರ 4 ಮಕ್ಕಳುಗಳು ಸ್ವಾಧೀನಾನುಭವದಲ್ಲಿದ್ದು ಸಾಗುವಳಿ ಮಾಡಿಕೊಂಡು ಬರುತ್ತಿದ್ದರು ಎಂರದೆ ಸಾಕ್ಷಿಯು ಬರೀ ಸ್ವಾಮಿ ಮತ್ತು ಕುಮಾರ್ ರವರು ದಾವಾ ಜಮೀನಿನ ಸ್ವಾಧೀನದಲ್ಲಿದ್ದರು ಎಂದು ನುಡಿಯುತ್ತಾರೆ. ದಾವಾ ಜಮಿನಿನಲ್ಲಿ ಯಾರು ಸ್ವಾಧಿನ ಇದ್ದರು ಎಂದು ನನಗೆ ದಾವಾಸ್ತಿಯಲ್ಲಿ 2 ಎಕರೆ ಯನ್ನು ಖರೀದಿಸುವ 2 ತಿಂಗಳ ಪೂರ್ವದಲ್ಲಿ ಸ್ವಾಮಿ ಮತ್ತು ಕುಮಾರ್ ರವರು ಇದ್ದ ಬಗ್ಗೆ ತಿಳಿದು ಬಂದಿರುತ್ತದೆ. ನಾನು ಜಮೀನನ್ನು ಖರೀದಿಸುವ ಪೂರ್ವದಲ್ಲಿ ಯಾವುದೇ ವಕೀಲರನ್ನು ಬೇಟಿ ಮಾಡಿ ಪತ್ರಗಳನ್ನು ಅವರಿಗೆ ತೋರಿಸಿ ನಂತರ ಅವರ ಸಲಹೇಯ ಮೇರೆಗೆ ಖರೀದಿಸಿರುವುದಿಲ್ಲ, ಸಾಕ್ಷಿಯು ಮುಂದುವರಿದು ನಾನು ಪಂಚಾಯಿತಿ ಪಾಲು ಪಾರಿಕತ್ತು ಮತ್ತು ಪಹಣಿ ಪತ್ರಿಕೆಗಳನ್ನು ನೋಡಿ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನೋಡಿದಂತಹ ಪಂಚಾಯಿತಿ ಪಾಲುಪಾರಿಕತ್ತು ದಾಖಲಾತಿಯು ಪಂಚಾಯಿತಿಯಲ್ಲಿ ಮಾಡಿಕೊಂಡ ದಾಖಲಾತಿಯಾಗಿರುತ್ತದೆ ಅದು ನೊಂದಾಯಿತ ದಾಖಲಾತಿ ಆಗಿರುವುದಿಲ್ಲ. ಸದರಿ ಪಂಚಾಯಿತಿ ಪಾಲುಪಾರಿಕತ್ತು ಸಣ್ಣಪ್ಪ ನವರ ಮಕ್ಕಳುಗಳಾದ ಸ್ವಾಮಿ ಮತ್ತು ಕುಮಾರ್ ರವರ ಮಧ್ಯೆ 1991-92 ನೇ ಸಾಲಿನಲ್ಲಿ ಆಗಿರುತ್ತದೆ. 1991-92 ನೇ ಸಾಲಿನಲ್ಲಿ ಆದ ಪಂಚಾಯಿತಿ ಪಾಲುಪಾರಿಕತ್ತು ನಂತೆ ಖಾತೆಯಾದ ಬಗ್ಗೆ ದಾಖಲಾತಿಯನ್ನು ನಾನು ನೋಡಿರುತ್ತೇನೆ. ದಾವಾಸ್ತಿ ಸಂಬಂಧಿಸಿದಂತೆ 2006-07 ರ ವರೆಗೂ ಸಣ್ಣಪ್ಪ ನವರ ಹೆಸರಿನಲ್ಲಿ ಪಹಣಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸಣ್ಣಪ್ಪನವರ

ಮಕ್ಕಳುಗಳಾದ ಸ್ವಾಮಿ ಮತ್ತು ಕುಮಾರ್ ರವರು ಸ್ವಾಧೀನದಲ್ಲಿ ಇದ್ದರು ಎಂದು ನುಡಿಯುತ್ತಾರೆ. 2006-07 ರಲ್ಲಿ ಸ್ವಾಮಿ ಮತ್ತು ಕುಮಾರ್ ರವರು ದಾವಾಸ್ತಿಯ ಸ್ವಾಧೀನದಲ್ಲಿ ಇದ್ದ ಬಗ್ಗೆ ಯಾವುದೇ ದಾಖಲಾತಿಯನ್ನು ನಾನು ಹಾಜರುಪಡಿಸಿರುವುದಿಲ್ಲ. ಸಣ್ಣಪ್ಪನವರ ಮಕ್ಕಳುಗಳಾದ ಸ್ವಾಮಿ ಮತ್ತು ಕುಮಾರ್ ರವರ ಹೆಸರಿಗೆ ಖಾತೆಯಾದ ಬಗ್ಗೆ ಎಂ ಆರ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಅವರೇ ಹಾಜರುಪಡಿಸಿದ ದಾಖಲಾತಿಯನ್ನು ತೋರಿಸಿ ನೀವು ಹೇಳುವಂತಹ ಎಂ ಆರ್ ಅನ್ನು ತೋರಿಸಿ ಎಂದರೆ ಸಾಕ್ಷಿಯು ದಾಖಲಾತಿಗಳನ್ನು ಪರಿಶೀಲಿಸಿ ಸದರಿ ಎಂ ಆರ್ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪಂಚಾಯಿತಿ ಪಾಲು ಪಾರಿಕತ್ತು ಮೂಲಕ ಸ್ವಾಮಿ ಮತ್ತು ಕುಮಾರ್ ರ ಹೆಸರಿಗೆ ಬಂದಿರುತ್ತದೆ ಎಂದು ಸುಳ್ಳು ಹೇಳಿರುತ್ತೇನೆ ಎಂದು ತಿಳಿದುಬರುತ್ತದೆ ಎಂಬ ಉದ್ದೇಶದಿಂದಲೇ ಸದರಿ ಎಂ ಆರ್ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಸಣ್ಣಪ್ಪ ನವರ ಮಕ್ಕಳುಗಳಾದಸ್ವಾಮಿ ಮತ್ತು ಕುಮಾರ್ ರವರ ಮಧ್ಯೆ ಯಾವುದೇ ಪಂಚಾಯಿತಿ ಪಾಲು ಪಾರಿಕತ್ ಆಗದೆ ಇದ್ದರೂ ಸಹ ಆಗಿರುತ್ತದೆ ಎಂದು ನಾನೇ ಸುಳ್ಳು ಸಾಕ್ಷಿ ನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ. ಪಂಚಾಯಿತಿ ಪಾಲು ಪಾರಿಕತ್ ಆಗಿರುವ ಬಗ್ಗೆ ನಾನು ಈ ದಿನವೆ ನ್ಯಾಯಾಲಯದಲ್ಲಿ ಮೊದಲ ಬಾರಿಗೆ ತಿಳಿಸಿರುತ್ತೇನೆ ಆ ಬಗ್ಗೆ ಎಲ್ಲಿಯೂ ಹೇಳಿರಲಿಲ್ಲ ಎಂದರೆ ಸರಿಯಲ್ಲ. ವಾದಿಗಳು ಸ್ವಾಮಿ ಮತ್ತು ಕುಮಾರ್ ರವರ ಅಕ್ಕಂದಿರು ಆಗಬೇಕು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಣ್ಣಪ್ಪನವರಿಗೆ ವಾದಿಗಳು ಸ್ವಾಮಿ ಮತ್ತು ಕುಮಾರ್ ರವರು ಇಬ್ಬರೇ ಮಕ್ಕಳು ಎಂದು ತೋರಿಸಲು ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ. ಸ್ವಾಮಿ ಮತ್ತು ಕುಮಾರ್ ರವರಿಗೆ ಕೆಂಪಮ್ಮ ಮತ್ತು ಪಾರ್ವತ್ತಮ್ಮ ಎಂಬ ಅಕ್ಕಂದಿರು ಇರುವ ಬಗ್ಗೆ ನ್ಯಾಯಾಲಯಕ್ಕೆ ಬಂದ ನಂತರ ಗೊತ್ತಾಗಿರುತ್ತದೆ.

5. ನಿಡಿ 27 ರ ವಂಶವೃಕ್ಷವನ್ನು 2 ಎಕರೆ ಜಮೀನನ್ನು ಖರೀದಿಸುವ ಪೂರ್ವದಲ್ಲಿ ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಅದನ್ನು ತೋರಿಸಿದ್ದರು ಎಂದು ನುಡಿಯುತ್ತಾರೆ. ನಿಡಿ 27 ರ ವಂಶವೃಕ್ಷವನ್ನು ಯಾವುದೇ ಪ್ರಮಾಣ ಪತ್ರದ ಆಧಾರದಲ್ಲಾಗಲೀ ಅಥವಾ ಛಾಪ ಕಾಗದಲ್ಲಾಗಲೀ ಬರೆಸಿರುವುದಿಲ್ಲ ಅದನ್ನು ಒಂದು ಬಿಳಿ ಹಾಳೆಯ ಮೇಲೆ ಬರೆಸಲಾಗಿರುತ್ತದೆ ಎಂದರೆ ಸರಿ, ಸಾಕ್ಷಿಯು ಮುಂದುವರಿದು ಹಿಂದೆ ಅದೇ ರೀತಿ ಬರೆಸಿ ಕೊಡಲಾಗುತ್ತಿತ್ತು ಎಂದು ನುಡಿಯುತ್ತಾರೆ. ನಿಡಿ 27 ರಲ್ಲಿ ಯಾವ ಉದ್ದೇಶಕ್ಕಾಗಿ ವಂಶವೃಕ್ಷವನ್ನು ನೀಡಲಾಗಿರುತ್ತದೆ ಎಂದು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. 2006-07 ರಲ್ಲಿ ಸ್ವಾಮಿ ಮತ್ತು ಕುಮಾರ್ ರವರಿಂದ ಆರ್ ಡಿ ವಂಶವೃಕ್ಷವನ್ನು ಅಂದರೆ ತಹಶೀಲ್ದಾರ್ ರವರ ಕಛೇರಿಯಿಂದ ನೀಡಲಾದ ವಂಶವೃಕ್ಷವನ್ನು ಪಡೆಯಲು ನಿಮಗೆನಾದರು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಯಾವುದೇ ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ನಿಡಿ 27 ರ ದಾಖಲಾತಿ ಯನ್ನು ಪಡೆಯುವ ಪೂರ್ವದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ನಾನು ಅರ್ಜಿಯನ್ನು ನೀಡಿದ್ದೆನು ಎಂದು ನುಡಿಯುತ್ತಾರೆ. ನಿಡಿ 27 ಅನ್ನು ಪಡೆಯುವ ಸಮಯ ನೀಡಿದ ಅರ್ಜಿಯ ಮೇಲೆ ತಹಶೀಲ್ದಾರ್ ರವರ ಕಛೇರಿಯಿಂದ ಸಹಿ ಮಾಡಿ ನೀಡುವಂತಹ ದಾಖಲಾತಿ ನನ್ನ ಬಳಿ ಇರುವುದಿಲ್ಲ. ನಾನು ಅರ್ಜಿಯನ್ನು ತಹಶೀಲ್ದಾರ್ ರವರ ಕಛೇರಿಗೆ ನೀಡಿದರೆ ಸದರಿ ಅರ್ಜಿಗೆ ಸ್ವೀಕೃತಿ ಸಂಖ್ಯೆ ನಮೂದಿಸಿ ಮತ್ತು ತಹಶೀಲ್ದಾರ್ ರವರ ಸಹಿ ಮತ್ತು ಸೀಲನ್ನು ಹಾಕಿ ನೀಡುತ್ತಾರೆ ಎಂದರೆ ಸಾಕ್ಷಿಯು ಸೀಲನ್ನು ಹಾಕಿರುವುದಿಲ್ಲ ಆದರೆ ರೌಂಡ್ ಸೀಲ್ ಹಾಕಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ 27 ವಂಶವೃಕ್ಷದಲ್ಲಿ ಕಾಣುವಂತಹ ತಹಶೀಲ್ದಾರ್ ರವರ ಕಾರ್ಯಲಯದ ಸೀಲಿನಲ್ಲಿ ದಿನಾಂಕವನ್ನು , ಅರ್ಜಿಯ ಸಂಖ್ಯೆಯನ್ನು ಮತ್ತು ಸಹಿಯನ್ನು ಹಾಕಿರುವುದಿಲ್ಲ ಅದನ್ನು ನಾನೇ ಸೃಷ್ಟಿ ಮಾಡಿಕೊಂಡು ತಂದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ತಹಶೀಲ್ದಾರವರ ಕಛೇರಿಗೆ ಅರ್ಜಿಯನ್ನು ನೀಡಿ ವಂಶವೃಕ್ಷವನ್ನು ಪಡೆದುಕೊಂಡಿದ್ದರು ನನ್ನ ಬಳಿ ಅರ್ಜಿಯು ಸಹ ಇರುತ್ತಿತ್ತು ಎಂದರೆ ಸಾಕ್ಷಿಯು

ಒಂದೇ ಕಾಫಿಯನ್ನು ತಹಶೀಲ್ದಾರ್ ರವರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ 25 ದಾಖಲಾತಿ ಯನ್ನು ಕುಮಾರ್ ರವರು ನನಗೆ ಜಮೀನನ್ನು ಮಾರಾಟ ಮಾಡಿ ಬಂದ ಹಣದಲ್ಲಿ ಹುಣುಸರು ತಾಲ್ಲೂಕಿನಲ್ಲಿ ಆಸ್ತಿಯನ್ನು ಖರೀದಿಸಿದ ಬಗ್ಗೆ ತೋರಿಸಲು ಸದರಿ ದಾಖಲಾತಿ ಯನ್ನು ಹಾಜರುಪಡಿಸಿರುತ್ತೇನೆ. ನಿಡಿ 25 ದಾಖಲಾತಿಗೆ ಸಂಬಂಧಿಸಿದಂತೆ ಕ್ರಯಪತ್ರವಾಗಲೀ ಇತರೆ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಸಾಕ್ಷಿಯು ಮುಂದುವರಿದು ನಾನು ಪಹಣಿಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ 25 ರಲ್ಲಿ ತೋರಿಸಿರುವ ಆಸ್ತಿಗೂ ವಾದಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ 12 ರಿಂದ 14 ರ ದಾಖಲಾತಿ ಗಳನ್ನು ದಾವೆ ಹೂಡಿದ ನಂತರ ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ವಾಸ ಇರುವ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ತೆಂಗಿನಮರ, ಸಿಲ್ವರ್ ಮರ ಕಾಳುಮೆಣಸು 2 ಬೋರ್ 2 ಚದರ ಮನೆ ಮತ್ತು ಪಹಣಿ ಪತ್ರಿಕೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ 2 ಚದರ ಮನೆಯನ್ನು ಕಟ್ಟಿಸಲು ಸಂಬಂದ ಪಟ್ಟ ಕಛೇರಿಯಿಂದ ಪರವಾನಿಗೆ ಪಡೆದು ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ಮನೆಗೆ ವಿದ್ಯುತ್ ಚಕ್ತಿ ಸಂಪರ್ಕವನ್ನು ಪಡೆದುಕೊಂಡಿರುತ್ತೇನೆ. ಸದರಿ ವಿದ್ಯುತ್ ಚಕ್ತಿ ಸಂಪರ್ಕವನ್ನು ಪಡೆದ ಬಗ್ಗೆ ಯಾವುದೇ ದಾಖಲಾತಿ ಯನ್ನು ಪಡೆದಿರುವುದಿಲ್ಲ. ನಾನು ಹೇಳಿರುಂವತೆ ದಾವಾಸ್ತಿಯಲ್ಲಿ ಯಾವುದೇ ಮನೆಯನ್ನು ಕಟ್ಟಿರುವುದು ಇಲ್ಲ ಯಾವುದೇ ವಿಧ್ಯುತ್ ಚಕ್ತಿ ಸಂಪಕರ್ವನ್ನು ಪಡೆದಿರುವುದಿಲ್ಲ ವಾದಿಗಳು, ಕುಮಾರ ಮತ್ತು ಸ್ವಾಮಿ ರವರು ಜಂಟೀ ಸ್ವಾಧೀನದಲ್ಲಿ ಇದ್ದು ವ್ಯವಸಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ತಿಯು ಪಿತ್ರಾರ್ಜಿತ ಒಟ್ಟು ಕುಟುಂಬದ ಆಸ್ತಿಯಾಗಿರುವುದರಿಂದ ಸ್ವಾಮಿ ಮತ್ತು ಕುಮಾರ್ ರವರಿಗೆ ಎಷ್ಟು ಹಕ್ಕು ಇರುತ್ತದೆಯೋ ಅಷ್ಟೆ ಹಕ್ಕು ವಾದಿಗಳಿಗೆ ಇರುತ್ತದ ಎಂದರೆ ಸರಿಯಲ್ಲ. ನಾನು

ಕುಮಾರ್ ರವರಿಂದ ಖರೀದಿಸಿರುಂತಹ ಕ್ರಯಪತ್ರವು ವಾದಿಗಳ ಹಕ್ಕಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಗಳು ಸಣ್ಣಪ್ಪ ನವರ ಮಕ್ಕಳು ಎಂದು ತಿಳಿದಿದ್ದರೂ ಸಹ ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ಅವರು ಸಣ್ಣಪ್ಪನವರ ಮಕ್ಕಳು ಎಂದು ತಿಳಿದಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ